ಡಿ.ಡಬ್ಲೂ–೧

ದಿ: ೨೬.೦೩.೨೦೨೬ ರಂದು ಆರೋಪಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಆರೋಪಿ ಪರವಾಗಿ ಶ್ರೀಮತಿ ಐ.ಪಿ. ವಕೀಲರಿಂದ.

ದಿ: ೧೧.೧೧.೨೦೨೦ ರಂದು ನೀಡಿದ ಪ್ರತ್ಯುತ್ತರ ನೋಟಿಸ್ಸಿನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ.೧ ಎಂದು, ಮೂಲ ದಾವೆ ಸಂಖ್ಯೆ ೧೦೪೪೮–೨೦೨೦ ದಾವೆಯ ವಾದ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿ.ಡಿ.೨ ಎಂದು ಗುರುತಿಸಲಾಯಿತು. ಆದ್ದರಿಂದ ಪ್ರಸ್ತುತ ಪಿರ್ಯಾದನ್ನು ವಜಾಗೊಳಿಸಿ ನನ್ನನ್ನು ನಿರಪರಾಧಿ ಎಂದು ಘೋಷಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**<u>ಪಾಟೀ ಸವಾಲು</u>**: ಪಿರ್ಯಾದಿ ಪರ ಶ್ರೀಯುತ ಎ.ಜಿ.ಎಸ್. ವಕೀಲರಿಂದ.

ನಾನು ದೊಡ್ಡದುನ್ನಸಂದ್ರ ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ಪಿರ್ಯಾದಿದಾರರು ದೊಡ್ಡದುನ್ನಸಂದ್ರದ ಸರ್ಕಲ್ ಬಳಿ ಕೃಷ್ಣಾ ಜ್ಯುವೆಲರ್ಸ, ಸಿಲ್ವರ್ಸ ಅಂಡ್ ಟೆಕ್ಸ್ ಟೈಲ್ ಎನ್ನುವ ಅಂಗಡಿಯನ್ನು ಹೊಂದಿರುತ್ತಾರೆ ಎಂದರೆ ಸರಿ. ಪಿರ್ಯಾದಿದಾರರು ದೊಡ್ಡದುನ್ನಸಂದ್ರ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ ಆ ರೀತಿ ಪಿರ್ಯಾದಿದಾರರು ದೊಡ್ಡದುನ್ನಸಂದ್ರ ಗ್ರಾಮದಲ್ಲಿ ವಾಸವಾಗಿರುವುದರಿಂದ ನನಗೆ ಬಹಳ ಪರಿಚಯಸ್ಥರು ಮತ್ತು ಆತ್ಮಿಯರು ಆಗಿರುತ್ತಾರೆ ಎಂದರೆ ಸರಿಯಲ್ಲ. ಪಿರ್ಯಾದಿದಾರರು ನಿಮಗೆ ಯಾವ ರೀತಿ ಪರಿಚಯವಾಗಿರುತ್ತಾರೆ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಆಗಾಗ್ಗೆ ಪಿರ್ಯಾದಿದಾರರ ಅಂಗಡಿಗೆ ಖರೀದಿಸಲು ಹೋಗುತ್ತಿದ್ದ ಮೇರೆಗೆ ಪರಿಚಯ ಆಗಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಆಗಾಗ್ಗೆ ಪಿರ್ಯಾದಿದಾರರ ಅಂಗಡಿಗೆ ಬಟ್ಟೆಯನ್ನು ಖರೀದಿಸಲು ಹೋಗುತ್ತಿದ್ದೆ ಎಂದರೆ ಸರಿ. ಆ ರೀತಿ ನಾನು ಪಿರ್ಯಾದಿದಾರರ ಅಂಗಡಿಗೆ ಬಟ್ಟೆ ಖರೀದಿಸಲು ಹೋದಾಗ ಬಟ್ಟೆ ಖರೀದಿಸಿ ಅದರ ಬಾಬ್ತು ಹಣವನ್ನು ಪಾವತಿಸಿ ಬರುತ್ತಿದ್ದೆ ಎಂದರೆ ಸರಿ. ಆ ರೀತಿ ನಾನು 5-6 ವರ್ಷದ ಹಿಂದೆ ಪಿರ್ಯಾದಿದಾರರ ಅಂಗಡಿಗೆ ಹೋಗಿದ್ದೆ.

2. ನನ್ನ ಮಗಳ ಹೆಸರು ಲಕ್ಷ್ಮಿ. ದಿ: 29.05.2016 ರಂದು ನನ್ನ ಮಗಳ ಮದುವೆ ಜರುಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಮಗಳ ಮದುವೆ ಸಲುವಾಗಿ ಪಿರ್ಯಾದಿದಾರರ ಅಂಗಡಿಯಲ್ಲಿ ಬಂಗಾರದ ಮತ್ತು ಬೆಳ್ಳಿಯ ಆಭರಣಗಳನ್ನು ಹಾಗೂ ಬಟ್ಟೆಗಳನ್ನು ಖರೀದಿಸಿರುತ್ತೇನೆ. ನಾನು ಪಿರ್ಯಾದಿದಾರರ ಅಂಗಡಿಯಲ್ಲಿ ಸುಮಾರು ಹನ್ನೆರಡರಿಂದ ಹದಿಮೂರು ಲಕ್ಷದ ವರೆಗೆ ಬಂಗಾರದ ಮತ್ತು ಬೆಳ್ಳಿಯ ಆಭರಣಗಳನ್ನು ಹಾಗೂ ಬಟ್ಟೆಗಳನ್ನು ಖರೀದಿಸಿರುತ್ತೇನೆ. ನಾನು ಪಿರ್ಯಾದಿದಾರರ ಬಳಿ ಹನ್ನೊಂದುವರೆ ಲಕ್ಷ ಮೌಲ್ಯದ ಬಂಗಾರದ ಮತ್ತು ಬೆಳ್ಳಿಯ ಆಭರಣಗಳನ್ನು ಹಾಗೂ ಬಟ್ಟೆಗಳನ್ನು ಖರೀದಿಸಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಎಷ್ಟು ಮೊತ್ತ ಎಂದು ನೆನಪಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನಾನು ಪಿರ್ಯಾದಿದಾರರಿಂದ ಖರೀದಿಸಿದ ಹನ್ನೊಂದುವರೆ ಲಕ್ಷ ಮೌಲ್ಯದ ವಸ್ತುಗಳ ಮೊತ್ತದ ಪೈಕಿ ಎರಡುವರೆ ಲಕ್ಷ ಹಣವನ್ನು ಬಂಗಾರ ಮತ್ತು ಬೆಳ್ಳಿಯ ಆಭರಣದ ಸಲುವಾಗಿ ಪಾವತಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಂದ ಖರೀದಿಸಿದ ಹನ್ನೊಂದುವರೆ ಲಕ್ಷ ಮೌಲ್ಯದ ವಸ್ತುಗಳ ಮೊತ್ತದ ಪೈಕಿ ಒಂದುವರೆ ಲಕ್ಷ ಹಣವನ್ನು ಬಟ್ಟೆ ಸಲುವಾಗಿ ಪಾವತಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಗೆ ಬಾಕಿ ಮೊತ್ತವನ್ನು ಮಗಳ ಮದುವೆಯಾದ ನಂತರ ಮರುಪಾವತಿಸುವುದಾಗಿ ಹೇಳಿ ವಸ್ತುಗಳನ್ನು ಪಡೆದುಕೊಂಡು ಬಂದಿದ್ದೆ ಎಂದರೆ ಸರಿಯಲ್ಲ. ಆ ರೀತಿ ನಾನು ನನ್ನ ಮಗಳ ಮದುವೆ ಮಾಡಿ ಮುಗಿಸಿದ ನಂತರ ಪಿರ್ಯಾದಿದಾರರು ನನ್ನ ಬಳಿ ಬಂದು ಬಾಕಿ ಹಣವನ್ನು

ಮರುಪಾವತಿಸುವಂತೆ ಕೇಳಿದಾಗ ನಾನು ಪಿರ್ಯಾದಿದಾರರ ಬಳಿ ಆರು ತಿಂಗಳ ವಾಯಿದೆಯನ್ನು ಕೇಳಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಯಾವುದೇ ಬಾಕಿ ಹಣವನ್ನು ಉಳಿಸಿಕೊಂಡಿರಲಿಲ್ಲ ಎಂದು ನುಡಿಯುತ್ತಾರೆ.

3. ನಾನು ವಸ್ತುಗಳನ್ನು ಖರೀದಿಸಿದ ಹಣವನ್ನು ಪಿರ್ಯಾದಿದಾರರಿಗೆ ನಗದು ಮೂಲಕ ನೀಡಿರುತ್ತೇನೆ. ನಾನು ಪಿರ್ಯಾದಿದಾರರಿಗೆ ವಸ್ತುಗಳನ್ನು ಖರೀದಿಸಿದ ದಿನವೇ ಹಣವನ್ನು ಪಾವತಿಸಿರುತ್ತೇನೆ. ನಾನು ನನ್ನ ಮಗಳ ಮದುವೆಯನ್ನು ಅದ್ದೂರಿಯಾಗಿ ಮಾಡಿರುತ್ತೇನೆ ಎಂದರೆ ಸರಿ. ನಾನು ನನ್ನ ಮಗಳ ಮದುವೆ ಸಲುವಾಗಿ ಹದಿನೈದರಿಂದ ಇಪ್ಪತ್ತು ಲಕ್ಷ ವ್ಯಯ ಮಾಡಿರುತ್ತೇನೆ. ನಾನು ದಿನಸಿ ಅಂಗಡಿಯನ್ನು ಹೊಂದಿ ವ್ಯವಸಾಯ ಮಾಡಿಕೊಂಡಿರುತ್ತೇನೆ. ನಾನು ದಿನಸಿ ಅಂಗಡಿಯ ಪರವಾನಿಗೆಯನ್ನು ಹೊಂದಿರುತ್ತೇನೆ. ಸದರಿ ದಿನಸಿ ಅಂಗಡಿಯ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ನಾನು ಯಾವುದೇ ಆದಾಯ ತೆರಿಗೆಯನ್ನು ಪಾವತಿಸಿರುವುದಿಲ್ಲ. ನಾನು ಯಾವುದೇ ಜಿ.ಎಸ್.ಟಿ.ಯನ್ನು ಪಾವತಿಸಿರುವುದಿಲ್ಲ.

4. ನನಗೆ ಇಪ್ಪತ್ತೈದು ಸಾವಿರ ಹೆಚ್ಚಗಿನ ಮೊತ್ತದ ಹಣದ ವ್ಯವಹಾರವನ್ನು ನಗದು ಮೂಲಕ ಮಾಡಬಾರದು ಎನ್ನುವ ವಿಷಯ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಇಪ್ಪತ್ತೈದು ಸಾವಿರ ಹೆಚ್ಚಗಿನ ಮೊತ್ತದ ಹಣದ ವ್ಯವಹಾರವನ್ನು ಚೆಕ್ಕು ಅಥವಾ ಬ್ಯಾಂಕ್ ಮೂಲಕ ಮಾಡಬೇಕು ಎನ್ನುವ ನಿಯಮದ ಕುರಿತು ನನಗೆ ಗೊತ್ತಿಲ್ಲ. ನಾನು ನನ್ನ ಮಗಳ ಮದುವೆಯ ಸಲುವಾಗಿ ವ್ಯಯ ಮಾಡಿದ್ದೇನೆ ಎಂದು ಹೇಳುವ ಹಣದ ಕುರಿತು ಯಾವುದೇ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ನಾನು ಯಾವುದೇ ಹಣವನ್ನು ಬ್ಯಾಂಕಿನಲ್ಲಿ ಇಟ್ಟಿರುವುದಿಲ್ಲ. ನಾನು ಯಾವುದೇ ದಿನಸಿ ಅಂಗಡಿಯನ್ನು ಹೊಂದಿ ವ್ಯವಸಾಯ ಮಾಡಿಕೊಂಡಿರುವುದಿಲ್ಲ ಮತ್ತು ನಾನು ನನ್ನ ಮಗಳ ಮದುವೆ ಮಾಡುವ ಸಲುವಾಗಿ ಪಿರ್ಯಾದಿದಾರರ ಅಂಗಡಿಯಿಂದ ಹನ್ನೊಂದುವರೆ ಲಕ್ಷ ಮೌಲ್ಯದ ಬಟ್ಟೆ ಮತ್ತು ಬಂಗಾರದ ಹಾಗೂ ಬೆಳ್ಳಿಯ ಆಭರಣಗಳನ್ನು ಖರೀದಿಸಿ ನಾಲ್ಕು ಲಕ್ಷ ಹಣವನ್ನು ಪಾವತಿಸಿ ಬಾಕಿ ಏಳುವರೆ ಲಕ್ಷ ಹಣವನ್ನು ಸಾಲವಾಗಿ ಉಳಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ದಿ: 30.07.2020 ರಂದು ಪಿರ್ಯಾದಿದಾರರು ನನ್ನ ಬಳಿ ಬಂದು ನಾನು ಬಾಕಿ ಉಳಿಸಿಕೊಂಡಿದ್ದ ಏಳುವರೆ ಲಕ್ಷ ಹಣವನ್ನು ಮರುಪಾವತಿಸುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ಸದರಿ ಬಾಕಿ ಏಳುವರೆ ಲಕ್ಷ ಹಣವನ್ನು ಮರುಪಾವತಿ ಸಲುವಾಗಿ ಮೂರು ಚೆಕ್ಕುಗಳನ್ನು ಪಿರ್ಯಾದಿದಾರರಿಗೆ ನೀಡಿದ್ದೆ ಎಂದರೆ ಸರಿಯಲ್ಲ.

5. ಆ ರೀತಿ ನಾನು ಪಿರ್ಯಾದಿದಾರರಿಗೆ ಎರಡುವರೆ ಲಕ್ಷ ಮೊತ್ತದ ಆಂಧ್ರ ಬ್ಯಾಂಕ್, ವೈಟ್ ಫೀಲ್ಡ್ ಶಾಖೆಯ ಚೆಕ್ ಸಂಖ್ಯೆ 000020 ಮತ್ತು ಎರಡುವರೆ ಲಕ್ಷ ಮೊತ್ತದ ಆಂಧ್ರ ಬ್ಯಾಂಕ್, ವೈಟ್ ಫೀಲ್ಡ್ ಶಾಖೆಯ ಚೆಕ್ ಸಂಖ್ಯೆ 000018, ಹಾಗೂ ಎರಡುವರೆ ಲಕ್ಷ ಮೊತ್ತದ ಆಂಧ್ರ ಬ್ಯಾಂಕ್, ವೈಟ್ ಫೀಲ್ಡ್ ಶಾಖೆಯ ಚೆಕ್ ಸಂಖ್ಯೆ 000019 ಚೆಕ್ಕುಗಳನ್ನು ನೀಡಿದ್ದೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಗೆ ಸದರಿ ಚೆಕ್ಕುಗಳನ್ನು ನೀಡುವಾಗ ನನ್ನ ಖಾತೆಯಲ್ಲಿ ಸಾಕಷ್ಟು ಹಣವಿದೆ ಮತ್ತು ಸದರಿ ಚೆಕ್ಕುಗಳನ್ನು ಬ್ಯಾಂಕಿಗೆ ಹಾಜರುಪಡಿಸುವಂತೆ ತಿಳಿಸಿದ್ದೆ ಎಂದರೆ ಸರಿಯಲ್ಲ. ಆ ರೀತಿ ನಾನು ಪಿರ್ಯಾದಿದಾರರಿಗೆ 3 ಚೆಕ್ಕುಗಳನ್ನು ಬ್ಯಾಂಕಿಗೆ ಹಾಜರುಪಡಿಸುವಂತೆ ತಿಳಿಸಿದ ಮೇರೆಗೆ ಪಿರ್ಯಾದಿದಾರರು ದಿ: 19.11.2020 ರಂದು ಎರಡುವರೆ ಲಕ್ಷ ಮೊತ್ತದ ಆಂಧ್ರ ಬ್ಯಾಂಕ್, ವೈಟ್ ಫೀಲ್ಡ್ ಶಾಖೆಯ ಚೆಕ್ ಸಂಖ್ಯೆ 000020 ನ್ನು ಮತ್ತು ದಿ: 22.12.2020 ರಂದು ಎರಡುವರೆ ಲಕ್ಷ ಮೊತ್ತದ ಆಂಧ್ರ ಬ್ಯಾಂಕ್, ವೈಟ್ ಫೀಲ್ಡ್ ಶಾಖೆಯ ಚೆಕ್ ಸಂಖ್ಯೆ 000018 ಹಾಗೂ ದಿ: 22.12.2020 ರಂದು ಎರಡುವರೆ ಲಕ್ಷ ಮೊತ್ತದ ಆಂಧ್ರ ಬ್ಯಾಂಕ್, ವೈಟ್ ಫೀಲ್ಡ್ ಶಾಖೆಯ ಚೆಕ್ ಸಂಖ್ಯೆ 000019 ನ್ನು ಬ್ಯಾಂಕಿಗೆ ಹಾಜರುಪಡಿಸಿದಾಗ ಅಮಾನ್ಯಗೊಂಡಿರುತ್ತವೆ ಎಂದರೆ ಸರಿಯಲ್ಲ. ಆ ರೀತಿ ಮೂರು ಚೆಕ್ಕುಗಳು ಅಮಾನ್ಯಗೊಂಡ ನಂತರ ಪಿರ್ಯಾದಿದಾರರು ನನ್ನ ಮನೆಗೆ ಭೇಟಿ ನೀಡಿ ಹಣವನ್ನು ವಾಪಸ್ ನೀಡುವಂತೆ ಸೂಚಿಸಿದ್ದರು ಎಂದರೆ ಸರಿಯಲ್ಲ. ಆ ರೀತಿ ಪಿರ್ಯಾದಿದಾರರು ನನ್ನ ಮನೆಗೆ ಬಂದು ಹಣ ಕೇಳಿದ ನಂತರ ನಾನು ಹಣ ವಾಪಸ್ಸು ನೀಡದ ಮೇರೆಗೆ ಪಿರ್ಯಾದಿದಾರರು ದಿ: 19.12.2020 ಮತ್ತು 28.12.2020 ರಂದು ವಕೀಲರ ಮೂಲಕ

ನನಗೆ ನೋಟಿಸ್ಸುಗಳನ್ನು ನೀಡಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ನೋಟಿಸ್ಸಿಗೆ ಪ್ರತ್ಯುತ್ತರ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

6. ಈಗ ನನಗೆ ತೋರಿಸಿದ ನಿಪಿ.೧ ಚೆಕ್ಕು ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ. ನಿಪಿ.1 ಚೆಕ್ಕನ್ನು ಪಿರ್ಯಾದಿದಾರರಿಗೆ ನಾನು ಪಿರ್ಯಾದಿದಾರರಿಂದ ಪಡೆದುಕೊಂಡಿದ್ದ ಬಂಗಾರದ ಮತ್ತು ಬೆಳ್ಳಿ ಆಭರಣ ಹಾಗೂ ಬಟ್ಟೆ ನಗದಿನ ಬಾಕಿ ಮರುಪಾವತಿ ಸಲುವಾಗಿ ನೀಡಿದ್ದೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಂದ ಸಾಲವಾಗಿ ಪಡೆದುಕೊಂಡಿದ್ದ ಬಂಗಾರದ ಮತ್ತು ಬೆಳ್ಳಿ ಆಭರಣ ಹಾಗೂ ಬಟ್ಟೆ ಬಾಬ್ತಿನ ಸಲುವಾಗಿ ಚೆಕ್ಕುಗಳನ್ನು ನೀಡಿದ್ದರು ನೀಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಂದ ಬಂಗಾರದ ಮತ್ತು ಬೆಳ್ಳಿ ಆಭರಣ ಹಾಗೂ ಬಟ್ಟೆಗಳನ್ನು ಸಾಲವಾಗಿ ಖರೀದಿಸಿದ್ದರು ನನ್ನ ವಕೀಲರ ಮೂಲಕ ಆ ರೀತಿ ಯಾವುದೇ ಸಾಲವನ್ನು ಪಡೆದುಕೊಂಡಿರುವುದಿಲ್ಲ ಎಂದು ಸುಳ್ಳು ಪ್ರತ್ಯುತ್ತರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಕೀಲರ ಮೂಲಕ ನೀಡಿದ ಪ್ರತ್ಯುತ್ತರ ನೋಟಿಸ್ಸಿನಲ್ಲಿ ನಿಪಿ.೧ ಚೆಕ್ಕನ್ನು ಪೊ.ಠಾಣೆಯಲ್ಲಿ ಬಲವಂತವಾಗಿ ಪಡೆದುಕೊಳ್ಳಲಾಗಿರುತ್ತದೆ ಎಂದು ಸುಳ್ಳಾಗಿ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ನಿಪಿ.1 ಚೆಕ್ಕನ್ನು ಪೊ.ಠಾಣೆಯಲ್ಲಿ ಬಲವಂತವಾಗಿ ಪಡೆದುಕೊಳ್ಳಲಾಗಿತ್ತು ಎನ್ನುವ ಕುರಿತು ನಾನು ಸ್ವತ: ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನನ್ನು ಪೊ.ಠಾಣೆಯಲ್ಲಿ ಕೂಡಿಹಾಕಲಾಗಿತ್ತು ಆದ್ದರಿಂದ ಯಾವುದೇ ದೂರನ್ನು ನೀಡಿರುವುದಿಲ್ಲ ಮತ್ತು ಮರುದಿನ ವಕೀಲರ ಮೂಲಕ ದೂರನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ನನ್ನನ್ನು ಪೊ.ಠಾಣೆಯಲ್ಲಿ ಕೂಡಿಹಾಕಿದ್ದರು ಎನ್ನುವ ಕುರಿತು ಯಾವುದೇ ದೂರನ್ನು ನೀಡಿರುವುದಿಲ್ಲ ಮತ್ತು ಆ ಕುರಿತು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ಆ ರೀತಿ ನಾನು ಪಿರ್ಯಾದಿದಾರರಿಂದ ಸಾಲವಾಗಿ ಪಡೆದುಕೊಂಡಿದ್ದ ಸಾಮಾಗ್ರಿಗಳ ಮೊತ್ತದ ಮರುಪಾವತಿ ಸಲುವಾಗಿ ಚೆಕ್ಕುಗಳನ್ನು ನೀಡಿದ್ದರು ಸದರಿ ಹಣವನ್ನು ಮರುಪಾವತಿಸಬೇಕಾಗುತ್ತದೆ ಎನ್ನುವ ದುರುದ್ದೇಶದಿಂದ ಪೊ.ಠಾಣೆಯಲ್ಲಿ ಬಲವಂತವಾಗಿ ಚೆಕ್ಕುಗಳನ್ನು ಪಡೆದುಕೊಳ್ಳಲಾಗಿತ್ತು ಎಂದು ಸುಳ್ಳಾಗಿ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ.

7. ನಾನು ಪಿರ್ಯಾದಿದಾರರ ವಿರುದ್ದ ನಿಪಿ.1 ಮತ್ತು ಇತರೆ ಎರಡು ಚೆಕ್ಕುಗಳನ್ನು ಬ್ಯಾಂಕಿಗೆ ಹಾಜರುಪಡಿಸದಂತೆ ನಿರ್ಭಂಧ ಕಾಜ್ಞೆ ಕೋರಿ ಸುಳ್ಳು ದಾವೆಯನ್ನು ದಾಖಲಿಸಿದ್ದೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಗೆ ನೀಡಬೇಕಾಗಿದ್ದ ಹಣವನ್ನು ಮರುಪಾವತಿಸುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ನಿ.ಡಿ.2 ದಾವೆಯನ್ನು ದಾಖಲಿಸಿದ್ದೆ ಎಂದರೆ ಸರಿಯಲ್ಲ. ನಿ.ಡಿ.೧ ಪಿರ್ಯಾದಿಗೆ ಜಾರಿಯಾಗಿದೆ ಎಂದು ತೋರಿಸುವ ಕುರಿತು ನನ್ನ ಬಳಿ ದಾಖಲೆಗಳು ಇವೆ ಮತ್ತು ಅವುಗಳನ್ನು ಮುಂದಿನ ಸುನಾವಣೆ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನಿ.ಡಿ.1 ನೋಟಿಸ್ಸು ಪಿರ್ಯಾದಿದಾರರಿಗೆ ಜಾರಿಯಾಗದೇ ಇರುವುದರಿಂದ ಆ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿ: 09.01.2021 ರಂದು ಪಿರ್ಯಾದಿದಾರರಿಗೆ ಯಾವುದೇ ನೋಟಿಸ್ಸನ್ನು ನೀಡಿರುವುದಿಲ್ಲ ಮತ್ತು ಆ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ.6 ದೂರು ನೀಡಿದ ನಂತರ ಸದರಿ ದೂರು ಏನಾಯಿತು ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅನುಗೊಂಡನಹಳ್ಳಿ ಪೊ.ಠಾಣೆಯಲ್ಲಿ ತೊಂದರೆ ನೀಡದಂತೆ ಹಿಂಬರಹ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹಿಂಬರಹ ನನ್ನ ಬಳಿ ಇರುತ್ತದೆ. ಸದರಿ ಹಿಂಬರಹದಲ್ಲಿ ನನಗೆ ಯಾರಿಂದಲೂ ತೊಂದರೆ ಆಗದಂತೆ ಪೊಲೀಸರು ನೋಡಿಕೊಳ್ಳುವುದಾಗಿ ಕಾಣಿಸಿರುತ್ತಾರೆ. ಸದರಿ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಪಿರ್ಯಾದಿದಾರರ ವಿರುದ್ದ ನಿ.ಡಿ.6 ಸುಳ್ಳು ದೂರನ್ನು ನೀಡಿದ ಮೇರೆಗೆ ಅದನ್ನು ಮುಕ್ತಾಯಗೊಳಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನಿಪಿ.1 ರಲ್ಲಿನ ಹಣವನ್ನು ಪಿರ್ಯಾದಿದಾರರಿಗೆ ಮರುಪಾವತಿಸಬೇಕಾಗುತ್ತದೆ ಎನ್ನುವ ಸಲುವಾಗಿ

ನಿ.ಡಿ.6 ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ವಿಚಾರಗಳನ್ನು ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.